ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 612/2018 .

ಪ್ರಾ.ಸಾ. : 1

ಚಾ.ಸಾ. : 1

| | | |
|---|---|---|
| ಹೆಸರು | : | ಕನಕರಾಜು ಜೆ |
| ತಂದೆಯ ಹೆಸರು | : | ವೆಂಕಟಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಉಪ ವಲಯ ಅರಣ್ಯಾಧಿಕಾರಿ |
| ವಿಳಾಸ | : | ಗುಡಿಬಂಡೆ |

... ........................................................................................................ ...

ದಿನಾಂಕ 25 ನೇ ಜೂನ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಸ ಸ ಅ ರವರಿಂದ : -

ನಾನು 2015 ರಿಂದ 2016 ರ ಅವಧಿಯಲ್ಲಿ ಕಲ್ಲಾಳ ಅರಣ್ಯವಲಯದಲ್ಲಿ ಪೊನ್ನಂಪೇಟೆ ಉಪ ವಲಯ ಅರಣ್ಯಾಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. **28.10.2015** ರಂದು ಬಾತ್ಮಿದಾರರಿಂದ ಖಚಿತ ಮಾಹಿತಿ ಬಂದಿರುತ್ತದೆ. ಹತ್‌ಗಾಟ್ ಅರಣ್ಯ ಪ್ರದೇಶದಲ್ಲಿ ಸರ್ವೆ ನಂ **148** ರಲ್ಲಿ ಕೇಶವನಕೊಲ್ಲಿ ಆಸುಪಾಸಿನಲ್ಲಿ ತೇಗದ ಮರಗಳನ್ನು ಕಡಿದು ಸಾಗಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ನಾನು ಚಾಸಾ **2, 3, 4, 5** ರವರು ಸದರಿ ಸ್ಥಳಕ್ಕೆ ಹೋದೆವು ಹಾಗೂ ಕಾದು ಕುಳಿತಿದ್ದೆವು. ಸ್ವಲ್ಪ ಸಮಯದ ನಂತರ ಮರಗಳನ್ನು ಕಡಿದು ನಾಟಗಳನ್ನಾಗಿ ಮಾಡುತ್ತಿರುವ ಶಬ್ದ ಕೇಳಿತು. ನಾವೆಲ್ಲರೂ ಸದರಿ ಶಬ್ದ ಕೇಳಿದ ಸ್ಥಳಕ್ಕೆ ಹೋದೆವು. ಅಲ್ಲಿ ಸುಮಾರು **4** ರಿಂದ **5** ಜನ ಇದ್ದರು. ಅವರು ತೇಗದ ಮರಗಳನ್ನು ಕಡಿದು ನಾಟಗಳನ್ನಾಗಿ ಪರಿವರ್ತಿಸುತ್ತಿದ್ದರು. ನಾವು ಮತ್ತು ಸಿಬ್ಬಂದಿ ಸದರಿ ಜನರನ್ನು ಹಿಡಿಯಲು ಹೋದಾಗ ಒಬ್ಬರು ಸಿಕ್ಕಿರುತ್ತಾರೆ. ಉಳಿದವರು ಅಲ್ಲಿಂದ ಪರಾರಿಯಾಗಿರುತ್ತಾರೆ.

ಸದರಿ ವ್ಯಕ್ತಿಯನ್ನು ವಿಚಾರಣೆ ಮಾಡಿದಾಗ ಅವರ ಹೆಸರು ಗಣೇಶ್, ನಿಟ್ಟೂರು ಗ್ರಾಮದ ಒಡ್ಡರಮಾಡದ ನಿವಾಸಿ ಎಂದು ತಿಳಿಸಿದರು. ಉಳಿದ ವ್ಯಕ್ತಿಗಳ ಬಗ್ಗೆ ಮಾಹಿತಿ ಕೇಳಿದಾಗ ಅಪ್ಪಿ , ಗಿರಿ, ಅಯ್ಯು, ಶೇಖರ್ ಎಂದು ತಿಳಿಸಿದರು. 2 ತೇಗದ ಮರಗಳನ್ನು ಕಡಿದಿರುವುದು ಕಂಡು ಬಂದಿರುತ್ತದೆ. ಮಹಜರ್ ಮಾಡಿ ಮರದ ನಾಟಗಳಿಗೆ ಇಲಾಖಾ ಚಾಪಾ ಗುರುತು ಕ್ರಮ ಸಂಖ್ಯೆ 1 ರಿಂದ 6 ಎಂದು ನೀಡಿರುತ್ತೇವೆ. ಕತ್ತಿ ಮತ್ತು ಗರಗಸವನ್ನು ಅಮಾನತುಪಡಿಸಿ ಕ್ರಮ ಸಂಖ್ಯೆ 7 ಮತ್ತು 8 ಎಂದು ನೀಡಿರುತ್ತೇವೆ. FOC ಅನ್ನು ಸ್ಥಳದಲ್ಲಿ ದಾಖಲಿಸಿರುತ್ತೇವೆ. ನ್ಯಾಯಾಲಯಕ್ಕೆ ಆರೋಪಿಯನ್ನು ಹಾಜರುಪಡಿಸಿರುತ್ತೇವೆ.

FOC ಅನ್ನು ನಿ ಪಿ 1 ಎಂದು, ಸಾಕ್ಷಿ ಸಹಿಯನ್ನು ನಿಪಿ 1 ಎ ಎಂದು, ಮಹಜರ್ ಅನ್ನು ನಿ ಪಿ 2 ಎಂದು, ಸಾಕ್ಷಿ ಸಹಿಯನ್ನು ನಿಪಿ 2 ಎ ಎಂದು, Property list ಅನ್ನು ನಿ ಪಿ 3 ಎಂದು, ಸಾಕ್ಷಿ ಸಹಿಯನ್ನು ನಿಪಿ 3 ಎ ಎಂದು, ದೂರನ್ನು ನಿಪಿ 4 ಎಂದು, ಸಾಕ್ಷಿ ಸಹಿಯನ್ನು ನಿಪಿ 4 ಎ ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೇಳಲಾಗಿ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)